# ವಿದ್ಯಾಗಮ

## ನಿರಂತರ ಕಲಿಕಾ ಕಾರ್ಯಕ್ರಮ

ಪಿಪಿಟಿ ಪ್ರಸ್ತುತಿ



ಶ್ರೀಮತಿ ಶುಭಾ ಎ ಆರ್.

ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಪ್ರೌಢಶಾಲಾ ವಿಜ್ಞಾನ

ಉತ್ತರ ವಲಯ -೧

ಬೆಂಗಳೂರು ಉತ್ತರ ಜಿಲ್ಲೆ

ಆಕರ :-ವಿದ್ಯಾಗಮದ ಪ್ರಸ್ತಾವನಾ ಪ್ರತಿ


# ವಿದ್ಯಾಗಮ

## ನಿರಂತರ ಕಲಿಕಾ ಕಾರ್ಯಕ್ರಮ

### ಕೊರೋನಾ ವೈರಸ್

ಮುಚ್ಚಿದ ಶಾಲೆಗಳು





ಖಾಲಿ ತರಗತಿ ಕೋಣೆಗಳು




# ಧ್ಯೇಯೋದ್ದೇಶ

- ಶಾಲಾ ಪುನರಾರಂಭದವರೆಗೂ ಮಕ್ಕಳನ್ನು ಶಾಲಾ ಸಂಪರ್ಕದಲ್ಲಿಡುವುದು
- ಮಕ್ಕಳಲ್ಲಿ ಮಾರ್ಗದರ್ಶಿತ ಸ್ವಯಂ ಕಲಿಕೆಯ ಪ್ರೇರಣೆ ಮೂಡಿಸುವುದು.
- ಮಧ್ಯಾಹ್ನದ ಉಪಾಹಾರ ಯೋಜನೆ ಮಕ್ಕಳ ಮನೆ ಬಾಗಿಲಿಗೆ ಪೂರೈಸುವುದು
- ಮಕ್ಕಳು ಸಾಮಾಜಿಕ ಪಿಡುಗುಗಳಿಗೆ ಬಲಿಯಾಗುವುದನ್ನು ತಪ್ಪಿಸುವುದು
- ಮಕ್ಕಳಲ್ಲಿ ಮನೋಸ್ಥೈರ್ಯವನ್ನು ಕಾಪಾಡುವುದು
- ಮಕ್ಕಳು ಶಾಲೆಯಿಂದ ಹೊರಗುಳಿಯದಂತೆ ತಡೆವುದು
- ಕೋವಿಡ್ ಹಿನ್ನಲೆಯಲ್ಲಿ ಮಕ್ಕಳ ನಿರಂತರ ಕಲಿಕೆಯನ್ನು ಮುಂದುವರೆಸುವುದು

# ಧ್ಯೇಯೋದ್ದೇಶ

- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಆದ್ಯತೆ ನೀಡುವುದು
- ವಲಸೆ ಮಕ್ಕಳ ಬಗ್ಗೆ ವಿಶೇಷ ಆದ್ಯತೆ ನೀಡುವುದು
- ಸಮುದಾಯದ ಎಲ್ಲಾ ಭಾಗೀದಾರರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಪ್ರೇರಣೆ ನೀಡುವುದು

# ವಿದ್ಯಾಗಮ ನಿರಂತರ ಕಲಿಕೆ ಕಾರ್ಯಕ್ರಮ ಅನುಷ್ಠಾನದ ವಿವಿಧ ಹಂತದ ಶ್ರೇಣಿ



# ಕಾಲ್ಪನಿಕ ಕಲಿಕಾ ಕೋಣೆಗಳು: ರಚನಾ ವಿಧಾನ

ಪ್ರತಿ ಶಾಲೆಯ ೨೦-೨೫ ಮಕ್ಕಳಿಗೆ ಒಬ್ಬ ಮಾರ್ಗದರ್ಶಿ ಶಿಕ್ಷಕರು

ಮಕ್ಕಳ ಹಂಚಿಕೆ ತರಗತಿವಾರು ಮಾಡದೇ ಮಕ್ಕಳ ವಾಸಸ್ಥಳ ಆಧರಿಸಿ ಮಾಡುವುದು

೧ -೫ ನೇ ತರಗತಿ ಒಂದು ಕೋಣೆ

೬ ರಿಂದ ೧೪ ವಯೋಮಾನದ ಎಲ್ಲಾ ಮಕ್ಕಳನ್ನೂ ಮಾರ್ಗದರ್ಶಿ ಶಿಕ್ಷಕರು ದಾಖಲಿಸಿಕೊಳ್ಳುವುದು

೮ ರಿಂದ ೧೦ ನೇ ತರಗತಿ ಒಂದು ಕೋಣೆ


೬ ರಿಂದ ೮ ನೇ ತರಗತಿ ಒಂದು ಕೋಣೆ

ಮಕ್ಕಳ ವಾಸಸ್ಥಳ ಆಧರಿಸಿ ಅಕ್ಕ ಪಕ್ಕ ಮನೆಯಿರುವ ಮಕ್ಕಳ ಕಲಿಕಾ ತಂಡ ರಚಿಸುವುದು

ಈ ಚಿಕ್ಕ ಕಲಿಕಾ ತಂಡವೇ ನೆರೆ-ಹೊರೆ ಗುಂಪು


ನೆರೆ-ಹೊರೆ ತಂಡದ ಸಂಪೂರ್ಣ ಹೊಣೆ ನೇಮಿಸಿದ ಮಾರ್ಗದರ್ಶಿ ಶಿಕ್ಷಕರದು

# ಕಲಿಕಾ ಸಾಮಗ್ರಿಗಳು








ಅಭ್ಯಾಸ ಪುಸ್ತಕ



ದಿನಚರಿ ಪುಸ್ತಕ

ನಿಗದಿತ ದಿನ ಮಕ್ಕಳನ್ನು ಮತ್ತು ಪೋಷಕರನ್ನು ತಂಡವಾರು ಶಾಲೆಗೆ ಕರೆಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಕಲಿಕಾ ಸಾಮಗ್ರಿ ವಿತರಿಸಿ ಸ್ವೀಕೃತಿ ಪಡೆವುದು

## ಪಠ್ಯಕ್ರಮ

- ಕೋವಿಡ್-೧೯ ಹಿನ್ನಲೆಯಲ್ಲಿ ಶೇಕಡ ೨೦ ರಿಂದ ೩೫ ರಷ್ಟು ಪಠ್ಯಕ್ರಮ ಕಡಿತಗೊಳಿಸಿದ್ದು ಇದನ್ನು ಡಿ ಎಸ್ ಇ ಆರ್ ಟಿ ಯ ಅಂತರ್ಜಾಲ ತಾಣ ದಲ್ಲಿ ನೀಡಲಾಗಿದ್ದು ಇದನ್ನೇ ಅನುಸರಿಸುವುದು

## ಮಧ್ಯಾಹ್ನದ ಉಪಾಹಾರ

- ಶಾಲಾ ಆರಂಭದವರೆಗೂ ಪ್ರತೀ ತಿಂಗಳ ಮೊದಲ ದಿನ ನೆರೆ ಹೊರೆ ತಂಡದ ಮಕ್ಕಳನ್ನು ಶಾಲೆಗೆ ಕರೆಸುವುದು
- ಒಂದು ತಿಂಗಳಿನ ಪೂರ್ಣ ಪ್ರಮಾಣದ ಆಹಾರ ಧಾನ್ಯ ವಿತರಿಸುವುದು
- ಮಕ್ಕಳ ಕಲಿಕಾ ಪ್ರಗತಿ ಚರ್ಚಿಸುವುದು
- ಪರಿಹಾರೋಪಾಯ ನೀಡುವುದು

# ಮಕ್ಕಳು ಮತ್ತು ಮಾರ್ಗದರ್ಶಿ ಶಿಕ್ಷಕರ ಸಂಪರ್ಕ

ಮಾರ್ಗದರ್ಶಿ ಶಿಕ್ಷಕರು ತಮಗೆ ಹಂಚಿಕೆಯಾಗಿರುವ ಕಲ್ಪನಿಕ ಕಲಿಕಾ ಕೋಣೆಯಲ್ಲಿನ ಮಕ್ಕಳ ಮನೆಯಲ್ಲಿ ಲಭ್ಯವಿರುವ ಸಂಪರ್ಕ ಸಾಧನಗಳ ಸಮೀಕ್ಷೆ ನಡೆಸುವುದು

ಸಮೀಕ್ಷೆ ನಂತರ ಲಭ್ಯ ಸಂಪರ್ಕ ಸಾಧನಗಳ ಆಧಾರದ ಮೇಲೆ ಮೂರು ವಿಧದ ಕಲಿಕಾ ಕೋಣೆಗಳನ್ನು ರೂಪಿಸುವುದು



# ೧. ಇಂಟೆಲಿಜೆಂಟ್ ಕೋಣೆ , ಇಂಟರ್ನೆಟ್‌ಸಹಿತ ಕೋಣೆ



ಸ್ಮಾರ್ಟ್ ಫೋನ್, ಕಂಪ್ಯೂಟರ್, ಇಂಟರ್ನೆಟ್ ಸೌಲಭ್ಯ ಹೊಂದಿರುವ ಮಕ್ಕಳ ಗುಂಪು






ಮಾರ್ಗದರ್ಶಿ ಶಿಕ್ಷಕರು ಜೂಮ್, ಸಿಸ್ಕೋ ವೆಬೆಕ್ಸ್, ಗೂಗಲ್ ಕ್ಲಾಸ್ ರೂಮ್ ನಂತಹ ತಂತ್ರಜ್ಞಾನ ಬಳಸಿ ಬೋಧನೆ ಮಾಡುವುದು.

ತರಗತಿವಾರು ಬೋಧನಾ ಸಮಯ ಅನುಪಾಲನೆ ಮಾಡುವುದು

ತರಗತಿ ನಂತರ ಸ್ವ ಕಲಿಕೆಗೆ ಪೂರಕ ಚಟುವಟಿಕೆ ನೀಡುವುದು



# ೨. ಬ್ರಿಲಿಯಂಟ್ ಕೋಣೆ, ಇಂಟರ್ನೆಟ್ ರಹಿತ ಮೊಬೈಲ್ ಕೋಣೆ











- ಪೋಷಕರ ಬಳಿ ಮಾತ್ರಾ ಮಾತ್ರಾ ಇಂಟರ್ನೆಟ್ ಇಲ್ಲದ ಮೊಬೈಲ್ ಇರುತ್ತದೆ.
- ಬೆಳಿಗ್ಗೆ ೯ ರೊಳಗೆ ಮತ್ತು ಸಂಜೆ ೬ರ ನಂತರದ ಅವಧಿಯಲ್ಲಿ ಮಾರ್ಗದರ್ಶಿ ಶಿಕ್ಷಕರು ಇಂತಹಾ ಮಕ್ಕಳೊಡನೆ ಸಂಪರ್ಕ ಸಾಧಿಸಿ ಎಸ್ ಎಮ್ ಎಸ್, ವಾಯ್ಸ್ ಮೆಸೆಜ್, ಕರೆಗಳ ಮೂಲಕ ಮಕ್ಕಳಿಗೆ ಮಾಡಬೇಕಾದ ಚಟುವಟಿಕೆಗಳನ್ನು ರಚಿಸುವುದು, ಮಾರ್ಗದರ್ಶನ ನೀಡುವುದು.

# ಜೀನಿಯಸ್ ಕೋಣೆ , ಮೊಬೈಲ್ ಅಥವಾ ಇನ್ನಿತರ ಸಂಪರ್ಕ ಸಾಧನಗಳಿಲ್ಲದ ಕೋಣೆ






ಮಾರ್ಗದರ್ಶಿ ಶಿಕ್ಷಕರಿಂದ ವಾರಕ್ಕೊಮ್ಮೆ ನೆರೆ ಹೊರೆ ತಂಡದ ಮಕ್ಕಳ ಭೇಟಿ
ಸಮುದಾಯಭವನ , ಮರದ ನೆರಳು, ಧಾರ್ಮಿಕ ಸ್ಥಳಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಂಡು ಭೇಟಿ
ಸ್ಥಳೀಯ ಸ್ವಯಂ ಸೇವಕರು, ಹಿರಿಯ ತರಗತಿಗಳ ಪ್ರತಿಭಾವಂತ ಮಕ್ಕಳು ಸಹಭಾಗಿತ್ವದೊಂದಿಗೆ ಕಲಿಕೆಗೆ ನೆರವಾಗುವುದು. ಈ ಮಕ್ಕಳು ಕಡ್ಡಾಯವಾಗಿ ಸಂವೇದ ,ದೂರದರ್ಶನ ಆಧಾರಿತ ಕಲಿಕೆ ಶೀರ್ಷಿಕೆಯಡಿ ಪ್ರಸಾರವಾಗುತ್ತಿರುವ ಪಾಠಗಳನ್ನು ವೀಕ್ಷಿಸುವುದನ್ನು ಮಾ .ಶಿ.ಕರು ಖಚಿತ ಪಡಿಸಿಕೊಳ್ಳುವುದು.

# ಕಲಿಕಾ ಕೋಣೆಯಲ್ಲಿ ನಡೆಸುವ ಚಟುವಟಿಕೆಗಳು

- ಅಭ್ಯಾಸ ಹಾಳೆಗೆ ಉತ್ತರಿಸುವುದು
- ಸ್ಥಳೀಯ ,ಮರುಬಳಕೆ ಸಾಮಗ್ರಿ ಬಳಸಿ  ಮಾಡುವ ಚಟುವಟಿಕೆಗಳು
- ಮನೆಯಲ್ಲಿ ಆಟಗಳ ಮೂಲಕ  ಕಲಿಕೆಗೆ ಪ್ರೋತ್ಸಾಹ
- ಪ್ರತಿಭೆಗೆ ತಕ್ಕ ಹವ್ಯಾಸ ರೂಢಿಸುವ ಮೂಲಕ ಕಲಿಕೆ
- ಓದು,ಬರಹ, ಹಾಡುಗಳ  ಮೂಲಕ ಭಾಷಾ ಕೌಶಲ್ಯ ಬೆಳವಣಿಗೆ
- ಮನೆಯಲ್ಲೇ ಮಾಡಬಹುದಾದ ಪ್ರಯೋಗಗಳು
- ಪಠ್ಯಕ್ಕೆ ಪೂರಕವಾದ ಯೋಜನೆಗಳು

# ಮುಖಾಮುಖಿ ಭೇಟಿ



೩ ಕೋಣೆಯ ಮಾರ್ಗದರ್ಶಿ ಶಿಕ್ಷಕರಿಂದ ಕನಿಷ್ಠ ವಾರಕ್ಕೊಮ್ಮೆ ನೆರೆ ಹೊರೆ ತಂಡ ಭೇಟಿ
ಅನುಕೂಲಕರ ಸ್ಥಳದಲ್ಲಿ ಭೇಟಿ .
ಮಾರ್ಗದರ್ಶಿ ಶಿಕ್ಷಕರು/ ಎಸ್ ಡಿ ಎಮ್ ಸಿ /ಸ್ವಯಂಸೇವಕರು ನೆರೆಹೊರೆ ಗುಂಪಿನ ಎಲ್ಲಾ ಮಕ್ಕಳನ್ನೂ ಒಟ್ಟಿಗೇ ಭೇಟಿ ಮಾಡುವುದು ಅಥವಾ ಪೋಷಕರ ಸಮ್ಮುಖದಲ್ಲಿ ಭೇಟಿ ಮಾಡುವುದು.
ಮಕ್ಕಳಲ್ಲಿರುವ ಸಂದೇಹ ಗೊಂದಲ ನಿವಾರಣೆ
ಸಮಸ್ಯೆಯಿದ್ದಲ್ಲಿ ಪೋಷಕರ ಭೇಟಿ
ಸ್ವಯಂ ಸೇವಕರು, ಎಸ್. ಖ. ಎಮ್. ಸಿ ಯವರ ಸಹಕಾರ ಪಡೆವುದು

- ಅಭ್ಯಾಸದ ಹಾಳೆಗಳು, ಮುಂದಿನವಾರದ ವೇಳಾಪಟ್ಟಿ ನೀಡುವಿಕೆ
- ಈ ಹಿಂದೆ ನೀಡಿರುವ ಅಭ್ಯಾಸದ ಹಾಳೆ/ಚಟುವಟಿಕೆ ಮೌಲ್ಯಮಾಪನ
- ಕಲಿಕಾ ಕೊರತೆಗಳ ಬಗ್ಗೆ ಪರಿಹಾರ
- ಮಕ್ಕಳಿಗೆ ಸಮಾಲೋಚನೆ
- ಪೋಷಕರು/ ಸಮುದಾಯದ ಸದಸ್ಯರೊಂದಿಗೆ ಒಟ್ಟಿಗೇ ಗುಂಪಿನ ಎಲ್ಲಾ ಮಕ್ಕಳ ಭೇಟಿ ಅಥವಾ ಪೋಷಕರಿದ್ದಾಗ ಮಾತ್ರಾ ಮನೆ ಭೇಟಿ

# ಬೋಧನಾ ಪ್ರಕ್ರಿಯೆ

೧-೫ ನೆ ತರಗತಿಗೆ ಮಾರ್ಗದರ್ಶಿ ಶಿಕ್ಷಕರಿಂದಲೆ ಎಲ್ಲಾ ವಿಷಯ ನಿರ್ವಹಣೆ

೬ ರಿಂದ ೧೦ ನೆ ತರಗತಿಗಳಿಗೆ ಮಾರ್ಗದರ್ಶಿ ಶಿಕ್ಷಕರು ತಾವು ಬೋಧಿಸುವ ವಿಷಯ ನಿರ್ವಹಿಸುವುದು ಹಾಗೂ ಇತರ ವಿಷಯಗಳ ಬೋಧನೆಗೆ ಸಂಬಂಧಿಸಿದ ವಿಷಯ ಶಿಕ್ಷಕರ ನೆರವು ಪಡೆವುದು

೬ ರಿಂದ ೧೦ ನೆ ತರಗತಿಗೆ ಆಯಾ ವಿಷಯ ಶಿಕ್ಷಕರು ಯೋಜನೆ, ಕಲಿಕಾ ಸಾಮಗ್ರಿ , ಮೌಲ್ಯಮಾಪನ ಸಾಮಗ್ರಿ ತಯಾರಿಸಿ ಮಾರ್ಗದರ್ಶಿ ಶಿಕ್ಷಕರಿಗೆ ನೀಡುವುದು

ಮಾ.ಶಿ. ತಮ್ಮ ಕೋಣೆಯ ಎಲ್ಲಾ ವಿದ್ಯಾರ್ಥಿಗಳಿಗೆ ಎಲ್ಲಾ ವಿಷಯಗಳ ಅಭ್ಯಾಸ ಹಾಳೆ, ರೂಪಣಾತ್ಮಕ ಪ್ರಶ್ನೆಪತ್ರಿಕೆ ತಲುಪಿಸಿ , ಉತ್ತರ ಪತ್ರಿಕೆಗಳ ಸಂಗ್ರಹಿಸಿ ವಿಷಯ ಶಿಕ್ಷಕರಿಗೆ ನೀಡುವುದು

ಅಭ್ಯಾಸ ಹಾಳೆಗಳ ವಿಷಯ ಶಿಕ್ಷಕರೇ ತಯಾರಿಸಬಹುದು ಅಥವ ಡಿ ಎಸ್ ಇ ಆರ್ ಟಿ ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು

ಶುಭಾ ಎ.ಆರ್, ಬಿ ಆರ್ .ಪಿ ,ಉತ್ತರ ವಲಯ-೧, ಬೆಂಗಳೂರು

# ನಿರಂತರ ವ್ಯಾಪಕ ಮೌಲ್ಯಮಾಪನ

ಗಣನೀಯ ಅವಧಿಗೆ ಭೌತಿಕವಾಗಿ ಶಾಲೆ ನಡೆಸಲು ಆಗದೇ ಇದ್ದಲ್ಲಿ ಎಸ್.ಎ.-೧ ಕೈ ಬಿಡಲಾಗುವುದು

→

ಎಫ್.ಎ. ೧,೨,೩,೪, ಗಳನ್ನು ಈ ಸಂದರ್ಭದಲ್ಲಿಯೂ ಮಾ.ಶಿ.ರೇ ಕೈಗೊಳ್ಳುವುದು

→

ಎಫ್. ಎ ಗಳಿಗೆ ದಿನಾಂಕ ನಿಗದಿಗೊಳಿಸುವ ಬದಲು ನಿಗದಿತ ಪಠ್ಯಕ್ರಮ ಪೂರ್ಣಗೊಂಡ ನಂತರ

ಮಾ ಶಿ.ರು ಸಂದರ್ಭೋಚಿತವಾಗಿ ನಡೆಸುವುದು

→

ಎಫ್ .ಎ ಗಳ ಫಲಿತಾಂಶವನ್ನು ಮಾ.ಶಿ. ಎಸ್ ಎ ಟಿ ಎಸ್ ನಲ್ಲಿ ಅಳವಡಿಸುವುದು ಕಡ್ಡಾಯ

→

೧೦ ನೆ ತರಗತಿಗಿಂತ ಕೆಳಗಿನ ತರಗತಿಗಳಿಗೆ ಎಫ್ ಎ ಗಳ ಆಧರಿಸಿ ಶ್ರೇಣಿ ನೀಡಿ ತೇರ್ಗಡೆ

→

ಈ ಕಾರ್ಯಕ್ರಮದಲ್ಲಿ ಪ್ರತಿ ಮಗುವಿನ ಚತುವಟಿಕೆಗಳನ್ನು ಕೃತಿ ಸಂಪುಟದಲ್ಲಿ ಮಾ.ಶಿ.ರು ದಾಖಲಿಸುವುದು

# ವಲಸೆ ಮಕ್ಕಳು





ವಲಸೆ ಹೋಗಿರುವ ಮಕ್ಕಳ ಮಾಹಿತಿಯನ್ನು ಮಾ.ಶಿ.ರು ಸಂಗ್ರಹಿಸಿ ಇಲಾಖೆಯ ಮೂಲಕ ಆ ಮಗು ವಲಸೆ ಹೋಗಿರುವಲ್ಲಿನ ಮಾ.ಶಿ.ರಿಗೆ ತಲುಪಿಸುವುದು

ತಮ್ಮ ಕಾಲ್ಪನಿಕ ಕಲಿಕಾ ಕೋಣೆಯಲ್ಲಿ ವಲಸೆ ಬಂದ ಮಗುವಿಗೆ ಯಾವುದೇ ದಾಖಲೆ ಕೇಳದೇ ಪೋಷಕರ ಹೇಳಿಕೆ ಆಧರಿಸಿ ಸೂಕ್ತ ತರಗತಿಗೆ ದಾಖಲು ಮಾಡಿಕೊಳ್ಳುವುದು.

- ವಲಸೆ ಬಂದ ಮಗುವಿಗೆ ಪಠ್ಯ ಪುಸ್ತಕ. ಕಲಿಕಾ ಸಾಮಗ್ರಿ, ಮಧ್ಯಾಹ್ನದ ಉಪಾಹಾರ ಯೋಜನೆಯ ಆಹಾರ ಧಾನ್ಯಗಳನ್ನು ಕಡ್ಡಾಯವಾಗಿ ನೀಡುವುದು
- ವಲಸೆ ಬಂದ ಮಕ್ಕಳ ಕಲಿಕಾ ಗುಣಮಟ್ಟವನ್ನು ಮೌಲ್ಯಮಾಪನ ಮಾಡಿ ಕಲಿಕಾ ಕೊರತೆ ಗುರ್ತಿಸುವುದು
- ಸೂಕ್ತ ಪರಿಹಾರ ಬೋಧನೆ ಕೈಗೊಳ್ಳುವುದು

# ವಿಶೇಷ ಅಗತ್ಯವುಳ್ಳ ಮಕ್ಕಳು





ಈ ಮಕ್ಕಳಿಗೆ ಮೇಲೆ ತಿಳಿಸಿದ ಎಲ್ಲಾ ಸೌಲಭ್ಯಗಳ ಜೊತೆಗೆ ಮಾ.ಶಿ.ರು ಬಿ ಐ ಇ ಆರ್ ಟಿ ಗಳ ಸಮನ್ವಯ ಪಡೆವುದು

ಈ ಮಕ್ಕಳನ್ನು ನ್ಯೂನ್ಯತೆವಾರು ಪಟ್ಟಿ ಮಾಡುವುದು

ಶ್ರವಣ ದೋಷವಿರುವ ಮಕ್ಕಳಿಗೆ NIOS sign language tv channel ವೀಕ್ಷಿಸಲು ಸಹಾಯ ಮಾಡುವುದು.

ಈ ಮಕ್ಕಳ ಮನೆಗೆ ಮಾ.ಶಿ.ಖುದ್ದು ಭೇಟಿ ನೀಡಿ ಅವರ ಕಲಿಕಾ ಪ್ರಗತಿ ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನಿಡುವುದು

ಈ ಮಕ್ಕಳು ಕಾಲ್ಪನಿಕ ಕಲಿಕಾ ಕೋಣೆಯಲ್ಲಿ ಇತರ ಮಕ್ಕಳ ಜೊತೆ ಬೆರೆಯಲು ಬಿ ಐ ಇ ಆರ್ ಟಿ ಗಳ ಸಹಾಯ ಪಡೆಯುವುದು

ಈ ಮಕ್ಕಳಿಗೆ ಪೂರಕವಾಗುವಂತಹ ಪ್ರತ್ಯೇಕ ಅಭ್ಯಾಸದ ಹಾಳೆಗಳನ್ನು ಹಾಗೂ ಸರಳ ಚಟುವಟಿಕೆಗಳ ರೂಪಿಸಿ ನೀಡುವುದು

# ಮುಖ್ಯ ಶಿಕ್ಷಕರ ಜವಾಬ್ದಾರಿಗಳು

ಶಾಲೆಯ ಎಲ್ಲಾ ಶಿಕ್ಷಕರಿಗೂ ೨೦೨೦-೨೧ ನೆ ಸಾಲಿಗೆ ವಹಿಸಿದ ತರಗತಿ ,ವಿಷಯಕ್ಕೆ ಸಮ್ಬಂಧಿಸಿದಂತೆ ನಿರಂತರ ಕಲಿಕಾ ಯೋಜನೆ ತಯಾರಿಸಿಕೊಳ್ಳಲು ತಿಳಿಸಿ ಖಚಿತಪಡಿಸಿಕೊಳ್ಳುವುದು

ಪಠ್ಯಪುಸ್ತಕಗಳ ಸಕಾಲಿಕ ಪೂರೈಕೆ

ಪೋಷಕರಿಗೆ ಆಹಾರ ಧಾನ್ಯ ವಿತರಣೆ

ಮಾಶಿ. ಬೇಡಿಕೆಯ ಅಭ್ಯಾಸ ಹಳೆ, ಕಲಿಕಾ  ಸಾಮಗ್ರಿಗೆ ಬೇಕಾದ ಹಣವನ್ನು ಶಾಲಾನುದಾನ/ಸಂಚಿತ ನಿಧಿಯಿಂದ ಭರಿಸುವುದು

ನೆರೆಹೊರೆ ತಂಡ ರಚಿಸಿ ಮಾ.ಶಿ.ಕರ ನೇಮಕ ಮಾಡುವುದು

ಪ್ರತೀ ಮಾ.ಶಿ.ಅನ್ವಯಿಸುವ ಬಗೆಯ ಕಾಲ್ಪನಿಕ ಕಲಿಕಾ ಕೋಣೆ ರೂಪಿಸಿರುವುದ ಖಚಿತಪಡಿಸಿಕೊಳ್ಳುವುದು

ಈ ಸವಾಲನ್ನು ಎದುರಿಸಲು ಮಾಶಿಕರಿಗೆ ಪ್ರೇರಣೆ ನಿಡುವುದು

ಇಲಾಖೆ ಒದಗಿಸಿದ ಪಠ್ಯಕ್ರಮದಂತೆ ವಿಷಯ ಹಂಚಿಕೆ , ವೇಳಾಪಟ್ಟಿ ತಯಾರಿಸಿ ಮಾರ್ಗದರ್ಶನ ಮಾಡುವುದು.

ನಿಗದಿತ ಭೌಗೋಳಿಕ ಪ್ರದೇಶದಲ್ಲಿ ನಡೆಸಿದ ಸಮೀಕ್ಷೆಪ್ರಕಾರ ವಲಸೆ ಬಂದ, ದಾಖಲಾಗದೆ ಉಳಿದ ಮಕ್ಕಳ ದಾಖಲಾತಿ ಮಾಡುವುದು

# ಮುಖ್ಯ ಶಿಕ್ಷಕರ ಜವಾಬ್ದಾರಿಗಳು

- ತಮ್ಮ ಶಾಲೆಯ ಮಕ್ಕಳು ವಲಸೆ ಹೋಗಿದ್ದಲ್ಲಿ ಆ ಮಕ್ಕಳ ಮಾಹಿತಿ ಇಲಾಖೆಗೆ ನೀಡುವುದು'
- ಮಕ್ಕಳ ದಾಖಲಾತಿ, ಹಾಗೂ ರೂಪಣಾತ್ಮಕ ಮೌಲ್ಯಮಪನಗಳ ಶ್ರೇಣಿಯನ್ನು ಎಸ್ ಎ ತಿ ಎಸ್ ನಲ್ಲಿ ದಾಖಲಿಸುವುದು
- ಕಾಲ್ಪನಿಕ ಕಲಿಕಾ ಕೋಣೆಗಳಿಗೆ ಅಗತ್ಯ ಸಂಪನ್ಮೂಲಗಳನ್ನು ಸಮುದಾಯದ ಸಹಕಾರದಿಂದ ಪಡೆವುದು
- ಪ್ರತೀ ಮಗುವಿನ ಕ್ರುತಿ ಸಂಪುಟ ಪರಿಶೀಲನೆ
- ಶಾಲಾನುದಾನ. ಸಂಚಿತನಿಧಿ, ಬಳಸಿ ಸಮುದಾಯದಿಂದ ಅನುದಾನ ಸಂಗ್ರಹಿಸಿ ಎಸ್ ಡಿ ಎಮ್ ಸಿ ಅನುಮೋದನೆಯೊಂದಿಗೆ ಬಳಸುವುದು
- ವಾರಕ್ಕೊಮ್ಮೆ ಮಾ.ಶಿ.ಕರ ಸಭೆ ನಡೆಸಿ ವಿದ್ಯಾಗಮ ಕಾರ್ಯಕ್ರಮದ ಪ್ರಗತಿ ವರದಿ ತಯಾರಿಸಿ ಇಲಾಖೆಗೆ ಕಳಿಸುವುದು.

# ಸಿ ಆರ್ ಪಿ/ ಇ ಸಿ ಒ/ ಬಿ ಆರ್ ಪಿ/ ಬಿ ಆರ್ ಸಿ ಜವಾಬ್ದಾರಿಗಳು

- ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲ್ಪನಿಕ ಕೋಣೆಗಳಲ್ಲಿನ  ಮಾ. ಶಿ.ಕರ ಜೊತೆ ನಿರಂತರ ಸಂಪರ್ಕದಲ್ಲಿರುವುದು
- ಅಗತ್ಯವಿದ್ದಾಗ ಮಾ.ಶಿ.ಕರ  ಭೇಟಿ
- ಶಾಲಾ ಮು.ಶಿ.ಕರು ಕರೆವ ಸಮನ್ವಯ ಸಭೆಯಲ್ಲಿ ಹಾಜರಾಗಿ ಮಾರ್ಗದರ್ಶನ ನೀಡುವುದು.
- ಕಲಿಕಾ ಸಾಮಗ್ರಿಗಳು , ಆಹಾರ ಧಾನ್ಯಗಳು ಎಲ್ಲಾ ಮಕ್ಕಳಿಗೂ ಸಕಾಲದಲ್ಲಿ ತಲುಪುವುದನ್ನು ಖಚಿತ ಪಡಿಸಿಕೊಳ್ಳುವುದು.
- ಮಾ.ಶಿ.ಕರಿಗೆ ಶೈಕ್ಷಣಿಕ ಬೆಂಬಲ ನೀಡುವುದು
- ಕಲಿಕಾ ಕೋಣೆಗಳ ಯಶೋಗಾಥೆಯನ್ನು ಇತರರಿಗೆ ಹಂಚಿಕೊಳ್ಳುವುದು
- ಪ್ರತಿ ೧೫ ದಿನಕ್ಕೊಮ್ಮೆ ತಮ್ಮ    ಕ್ಷೇತ್ರದ ವಿದ್ಯಾಗಮ ಕಾರ್ಯಕ್ರಮದ ಪ್ರಗತಿ ವರದಿ ಮೇಲಧಿಕಾರಿಗಳಿಗೆ ತಲುಪಿಸುವುದು.
- ಪ್ರತೀ ಮಗುವಿನ ಕೃತಿ ಸಂಪುಟ ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವುದು
- ತಮ್ಮ ಸಲಹೆಗಳನ್ನು ದಾಖಲಿಸುವುದು.

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಜವಾಬ್ದಾರಿಗಳು

- ವಿದ್ಯಾಗಮ ಕುರಿತ ಮಾಹಿತಿ ಹಂಚಿಕೆಗೆ ತಮ್ಮ ವಲಯದ ಎಲ್ಲಾ ಶಾಲೆಗಳ ಮು.ಶಿ.ಕರಿಗೆ ತರಬೆತಿ ಆಯೋಜಿಸುವುದು
- ವಲಯದ ಎಲ್ಲಾ ಶಿಕ್ಷಕರಿಗೂ ಒದೊಂದು ಕಾಲ್ಪನಿಕ  ಕಲಿಕಾ ಕೋಣೆ ರೂಪಿಸಲು ಶಾಲೆಗಳಿಗೆ ಮಾರ್ಗದರ್ಶನ ಮತ್ತು ಸಹಕಾರ ನಿಡುವುದು.
- ಪ್ರತೀ ಮಗು ಯಾವುದಾದರೊಂದು ಕಲಿಕಾ ಕೋಣೆಯಲ್ಲಿರುವುದನ್ನ ಖಚಿತ ಪಡಿಸಿಕೊಳ್ಳುವುದು
- ಪ್ರತೀ ಮಗುವಿನ ಕೃತಿ ಸಂಪುಟ ನಿರ್ವಹಣೆಯಾಗುತ್ತಿರುವುದರ ಬಗ್ಗೆ ಖಚಿತ ಪಡಿಸಿಕೊಳ್ಳುವುದು
- ಗ್ರಾಮ/ತಾಲೂಕು ಪಂಚಾಯತ್, ಸ್ಥಳೀಯ ದಾನಿಗಳು, ಎನ್ ಜಿ ಒ  ಮತ್ತು  ಇತರರಿಗೆ ಈ ಕಾರ್ಯಕ್ರಮದ ಬಗ್ಗೆ ಮನವರಿಕೆ ಮಾಡಿಸಿ ಇವರ ಸಹಭಾಗಿತ್ವದಲ್ಲಿ ಕಾರ್ಯಕ್ರಮ ಯಶಸ್ವಿಯಾಗಲು ಅಗತ್ಯ ಕ್ರಮ ವಹಿಸುವುದು.
- ನಿಗದಿಪಡಿಸಿರುವಂತೆ ಚಟುವಟಿಕೆಗಳನ್ನು ಪೂರ್ಣಗೊಳಿಸಲು ಎಲ್ಲಾ ಶಿಕ್ಷಕರೂ ಕ್ರಮವಹಿಸಿರುವುದನ್ನು ಖಚಿತ ಪಡಿಸಿಕೊಳ್ಳುವುದು
- ಪ್ರ್ರ್ತೀ ೧೫ ದಿನಕ್ಕೊಮ್ಮೆ ಮೇಲ್ವಿಚಾರಣಾ ವರದಿಯನ್ನು ಜಿಲ್ಲೆಯ ಉಪನಿರ್ದೇಶಕರಿಗೆ ಸಲ್ಲಿಸುವುದು.

# ಡಯಟ್ ಪ್ರಾಂಶುಪಾಲರು, ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರ ಜವಾಬ್ದಾರಿಗಳು

- ಸೂಚಿಸಿರುವ ಮೂರೂ ಕಾಲ್ಪನಿಕ ಕೋಣೆಗಳಿಗೆ ಪ್ರತ್ಯೇಕವಾದ ತರಬೇತಿ ಮಾರ್ಗಸೂಚಿ ಅಭಿವೃದ್ಧಿ ಪಡಿಸುವುದು.
- ತರಬೇತಿಯ ಮೂಲಕ ಮಾ.ಶಿ.ಕರು ಸ್ವಾವಲಂಬಿಯಾಗಿ ಕಾರ್ಯ ನಿರ್ವಹಿಸಲು ಮಾರ್ಗದರ್ಶನ ನೀಡುವುದು.
- ಮಾ.ಶಿ.ಕರಿಗೆ ಅಗತ್ಯ ಸಂಪನ್ಮೂಲ ಪಡೆಯಲು ಆಕರಗಳನ್ನು ಸೂಚಿಸುವುದು.
- ಹಿರಿಯ ಮತ್ತು ಕಿರಿಯ ಉಪನ್ಯಾಸಕರನ್ನು ಈ ಕಾರ್ಯಕ್ರಮದ ನೋಡಲ್ ಅಧಿಕಾರಿಗಳಾಗಿ ನೇಮಿಸಿ ಪರಿಣಾಮಕಾರೀ ಅನುಷ್ಠಾನಕ್ಕೆ ಕ್ರಮ ವಹಿಸುವುದು
- ಸಾಮಾಜಿಕ ಜಾಲ ತಾಣಗಳ ಮೂಲಕ ಮಾ.ಶಿ.ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಕಲಿಕೆ ಮತ್ತು ಗೃಹ ಪಾಠಗಳ ಅನುಪಾಲನೆಯಾಗುತ್ತಿರುವುದನ್ನು ಪರಿಶೀಲಿಸುವುದು.
- ಪ್ರತೀ ೧೫ ದಿನಕ್ಕೊಮ್ಮೆ ಪ್ರಗತಿ ವರದಿಯನ್ನು ನಿರ್ದೇಶಕರು, ಡಿ ಎಸ್ ಇ ಆರ್ ಟಿ ಇವರಿಗೆ ಸಲ್ಲಿಸುವುದು.

# ಜಿಲ್ಲಾ  ಉಪನಿರ್ದೇಶಕರು , ಆಡಳಿತ ಇವರ ಜವಾಬ್ದಾರಿಗಳು

**ಉಪನಿರ್ದೇಶಕರು ಆಡಳಿತ**

- ಶಾಲೆಗಳಿಗೆ ಎನ್ ಜಿ ಒ ,ಶಿಕ್ಷಣಾಸಕ್ತರ ನೆರವು
- ಪ್ರತೀ ಮಗುವಿನ ಕೃತಿ ಸಂಪುಟ
- ಜಿಲ್ಲೆಯಲ್ಲಿ ವ್ಯಾಪಕ ಪ್ರಚಾರ
- ಜಿಲ್ಲಾಡಳಿತ, ನಗರಾಭಿವೃದ್ಧಿ ಇಲಾಖೆ, ಪಂಚಾಯತ್ ರಾಜ್, ಮಹಿಳಾ ಮತ್ತುಮಕ್ಕಳ ಕಲ್ಯಾಣ ಇಲಾಖೆಗಳ ಸಹಯೋಗ ಮತ್ತು ಸಮನ್ವಯ
- ಪೋಷಕರು ವಲಸೆ ಹೋಗಿದ್ದಲ್ಲಿ ಅಂತಹಾ ಮಕ್ಕಳಿಗೆ ವಿವಿಧ ಇಲಾಖೆಗಳು ನಡೆಸುತ್ತಿರುವ ವಸತಿನಿಲಯಗಳಲ್ಲಿ ವಸತಿ ಕಲ್ಪಿಸುವಿಕೆ
- ಕಾರ್ಯಕ್ರಮ ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು
- ಶಾಲೆಗಳಿಗೆ ಅಗತ್ಯವಿದ್ದಲ್ಲಿ ತಾಂತ್ರಿಕ ಅಥವಾ ಸಂಪನ್ಮೂಲ ಪೂರೈಕೆ
- ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ಸ.ನಿ.,ವಿಷಯ ಪರಿವೀಕ್ಷಕರನ್ನು ನೋಡಲ್ ಗಳಾಗಿ ನೇಮಿಸುವುದು
- ಪ್ರತಿ ೧೫ ದಿನಕ್ಕೊಮ್ಮೆ ಪ್ರಗತಿ ವರದಿಯನ್ನು ನಿರ್ದೇಶಕರು,ಡಿ ಎಸ್ ಇ ಆರ್ ಟಿ,ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇವರಿಗೆ ಸಲ್ಲಿಸುವುದು

# ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು

1

ಎಲ್ಲಾ ಇಲಾಖೆಗಳ ಸಹಕಾರ ಮತ್ತು ಸಮನ್ವಯದೊಂದಿಗೆ ವಿದ್ಯಾಗಮ ಕಾರ್ಯಕ್ರಮವನ್ನು ಜಿಲ್ಲೆಯ ಪ್ರತೀ ಮಗುವಿಗೂ ತಲುಪಿಸುವುದು

2

ಕಾರ್ಯಕ್ರಮದ ಪ್ರಾಮುಖ್ಯತೆಯನ್ನು ಜನಪ್ರತಿನಿಧಿಗಳು ಮತ್ತು ಶಿಕ್ಷಣ ಸ್ಥಾಯಿ ಸಮಿತಿಯ ಗ್ವಮನಕ್ಕೆ ತಂದು ಕಾರ್ಯಕ್ರಮ ಯಶಸ್ವಿಗೊಳಿಸುವುದು.

# ಸಂವೇದ, ದೂರದರ್ಶನ ಆಧಾರಿತ ಕಲಿಕೆ



ಇದು ಟಿವಿ ಆಧಾರಿತ ಕಲಿಕಾ ಕಾರ್ಯಕ್ರಮ

ಸಾ ಶಿ.ಇಲಾಖೆ ಕರ್ನಾಟಕ ದಿಂದ ಪ್ರತ್ಯೇಕವಾದ ಸಂವೇದ ವಾಹಿನಿ ಆರಂಭಿಸಲಾಗಿದೆ

ಈ ವಾಹಿನಿಯಲ್ಲಿ ದಿನ ಪೂರ್ತಿ ೧ ರಿಂದ ೧೦ ನೆ ತರಗತಿವರೆಗೆ ನಿಗದಿತ ವೇಳಾಪಟ್ಟಿಯಂತೆ ಪರಿಣಿತ ಶಿಕ್ಷಕರ ಬೋಧನೆಯ ವೀಡಿಯೊ ತಯಾರಿಸಿ ಪ್ರಸಾರ ಮಾಡಲಾಗುತ್ತದೆ.

ವಿದ್ಯಾಗಮದ ಜೀನಿಯಸ್ ಕೋಣೆಯ ಮಕ್ಕಳಿಗೆ ಇದು ಬಹಳ ಉಪಯುಕ್ತ.

ಉಳಿದ ಎರಡು ಕೋಣೆಗಳ ಮಕ್ಕಳೂ ಈ ಕಾರ್ಯಕ್ರಮದ ಲಾಭ ಪಡೆಯಬಹುದು.

ಆದರೆ ಈ ಕಾರ್ಯಕ್ರಮ ವಿದ್ಯಾಗಮಕ್ಕೆ ಪೂರಕವಾಗಿರುತ್ತದೆಯೇ ಹೊರತು ಆದಕ್ಕೆ ಪರ್ಯಾಯವಲ್ಲ.

ಮಾರ್ಗದರ್ಶಿ ಶಿಕ್ಷಕರು ಇಲ್ಲಿ ಪ್ರಸಾರವಾಗುವ ಪಾಠಗಳ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಿ ಆ ಮಕ್ಕಳು ಪಾಠ ವೀಕ್ಷಣೆ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು.